**ದಿನಾಂಕ 07.10.2024 ರಂದು** ಸಾಕ್ಷಿಗೆ **ಪ್ರಮಾಣ ವಚನ ಬೋಧಿಸಲಾಯಿತು.**

ಪಾಟಿ ಸವಾಲು ಆರೋಪಿ ಪರ ಶ್ರೀ. ಎಚ್ ಎನ್ ಕೆ **ವಕೀಲರವರಿಂದಃ**

ನಾನು ಬಿ ಎ ಪದವೀಧರನಾಗಿರುತ್ತೇನೆ. ನಾನು ಈಗ ವ್ಯವಸಾಯ ಮಾಡುತ್ತೇನೆ. ನನ್ನ ಕೃಷಿ ಜಮೀನಿನ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಹೆಸರಿನಲ್ಲಿ ಯಾವುದೇ ಕೃಷಿ ಜಮೀನು ಇರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಎರಡುವರೆ ಎಕರೆ ನೀರಾವರಿ ಜಮೀನು ಇದ್ದು, ಕಬ್ಬು, ತರಕಾರಿ ಬೆಳೆಗಳನ್ನು ಬೆಳೆಯುತ್ತೇವೆ. ಕೃಷಿ ಭೂಮಿಯಿಂದ ಬರುವ ಆದಾಯದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಪ್ರವೀಣ
**ಪಿ.ಡಬ್ಲ್ಯೂ-1**

**2.** ನನ್ನ ತಂದೆ ತಾಯಿಗೆ ನಾನು ಒಬ್ಬನೇ ಮಗ. ನಾನು ಕೃಷಿಯೊಂದಿಗೆ ಸೈಟುಗಳನ್ನು ತೆಗೆದುಕೊಂಡು ಮಾರಾಟ ಮಾಡುವ ವ್ಯಾಪಾರ ಮಾಡುತ್ತೇನೆ. ನನಗೆ ವಾರ್ಷಿಕ ಆದಾಯ ರೂ **5,00,000/-** ಬರುತ್ತದೆ. ನಾನು ರಿಯಲ್ ಎಸ್ಟೇಟ್ ವ್ಯಾಪಾರ ಮಾಡುತ್ತೇನೆ ಎಂದು ತೋರಿಸಲು ಅದಕ್ಕೆ ಸಂಬಂಧಪಟ್ಟ ದಾಖಲೆಗಳು ಇರುವುದಿಲ್ಲ. ನನಗೆ ವಾರ್ಷಿಕ ಆದಾಯ ರೂ **5,00,000/-** ಬರುತ್ತದೆ ಎಂದು ತೋರಿಸಲು ಸಂಬಂಧಪಟ್ಟ ಆದಾಯ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲ, ಸದರಿ ಆದಾಯ ಪ್ರಮಾಣ ಪತ್ರವನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ.

**3.** ಆರೋಪಿಯು ನಮ್ಮ ಗ್ರಾಮದ ಪಕ್ಕದ ಗ್ರಾಮದವರು, ಆದ್ದರಿಂದ ನನಗೆ ಪರಿಚಯವಾದರು. ಆರೋಪಿಯ ತಂದೆಯ ಹೆಸರು ಚನ್ನೇಗೌಡ. ಆರೋಪಿಯು ಆಲೆಮನೆ ನಡೆಸುತ್ತಾ ಕೃಷಿಯನ್ನುಮಾಡುತ್ತಾರೆ. ನಾನು ಆರೋಪಿಯ ಆಲೆಮನೆಗೆ ಖುದ್ದಾಗಿ ಭೇಟಿ ಮಾಡಿರುವುದಿಲ್ಲ.

**3.** ಆರೋಪಿ ಹಣ ಕೇಳಲು ನಮ್ಮ ಮನೆಗೆ ಒಬ್ಬರೇ ಬಂದಿದ್ದರು. ಆ ಸಮಯದಲ್ಲಿ ಮನೆಯಲ್ಲಿ ನಾನು ಒಬ್ಬನೇ ಇದ್ದೆನು. ನಾನು ಹಣ ಕೊಡುವ ಒಂದು ವಾರದ ಹಿಂದೆ ಆರೋಪಿ ನನ್ನ ಬಳಿ ಹಣ ಬೇಕು ಎಂದು ಕೇಳಿರುತ್ತಾರೆ. ಆರೋಪಿಗೆ ಕೊಟ್ಟಿರುವ ಸಾಲದ ಹಣ ನಮ್ಮ ಮನೆಯಲ್ಲಿ ಇತ್ತು, ನಾನು ಆ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ. ನನಗೆ ಬ್ಯಾಂಕಿನ ವ್ಯವಹಾರಗಳು ಚೆನ್ನಾಗಿ ಗೊತ್ತು ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ವ್ಯಕ್ತಿಗೆ ರೂ **20,000/-** ಗಿಂತಲೂ ಹೆಚ್ಚಿನ ಹಣ ಕೊಡಬೇಕಾದರೆ ಕಾನೂನಿನ ಪ್ರಕಾರ ಬ್ಯಾಂಕಿನ ಮೂಲಕವೇ ಕೊಡಬೇಕು ಎಂದರೆ ಸರಿ. ಆರೋಪಿಗೆ ಬ್ಯಾಂಕಿನ ಮೂಲಕ ಹಣ ಕೊಡಲು ತೊಂದರೆ ಇತ್ತೆ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಎಂದು ನುಡಿದರು.
ಮುಂದುವರಿದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಗಿದೆ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಪಾಂಡವಪುರ